ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶ್ರೀ ಶಂಕರನಾರಾಯಣ ಮಹಾತ್ಮೆ

ಕವಿ

## ದಿನೇಶ ಉಪ್ಪೂರ ಎಂ. ಎನ್.

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ಏ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಪದ್ಮ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪುಸ್ತಕನಿಧಿ, ಕುಂದಾಪುರ - ೨೦೧೩

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೧೬

**ಪಾತ್ರಗಳು:**

ದೇವೇಂದ್ರ, ವರುಣ, ಅಗ್ನಿ, ಖರಾಸುರ, ರಟ್ಟಾಸುರ, ಈಶ್ವರ, ಚಂದ್ರ ಭಟ್ಟ, ಗೋವಿಂದ ಉಪಾಧ್ಯ, ಕ್ರೋಢಮುನಿ, ಬ್ರಹ್ಮ, ವಿಷ್ಣು, ನಾರದ, ಅಗಸ್ತ್ಯ, ಮಾಂಡವ್ಯ, ಜಮದಗ್ನಿ, ಲೋಮಶ, ಶಂಕರನಾರಾಯಣ, ಗರುಡ, ಹನುಮಂತ, ನಂದಿ, ವೀರಭದ್ರ, ರೇಣುಕಾ, ಮತ್ತು ಕರಾಳಮಂತ್ರಿ

**ಕಥಾ ಸಾರಾಂಶ:**

ದೇವೇಂದ್ರನ ಒಡ್ಡೋಲಗ. ಜಂಭಾಸುರನ ಮಕ್ಕಳಾದ ಖರ ರಟ್ಟಾಸುರರ ತಪಸ್ಸು. ಹರನ ವರ, ಹರಿಹರರು ಒಂದೇ ಶರೀರದಿಂದ ಐವರಾಗಿ ಯುದ್ಧಕ್ಕೆ ಬಂದಾಗ ಮರಣ ಬರಲಿ ಎಂದು. ದೇವಲೋಕಕ್ಕೆ ಧಾಳಿ. ದೇವೇಂದ್ರನ ಪಲಾಯನ. ಶೈವರು ವೈಷ್ಣವರಲ್ಲಿಮತಕಲಹ. ಕ್ರೋಢಮುನಿಯಿಂದ ಹರಿಹರರಲ್ಲಿ ಬೇಧವಿಲ್ಲವೆಂದು ಉಪದೇಶ. ತಪಸ್ಸಿಗೆ ಪ್ರಯಾಣ. ದೇವೇಂದ್ರನ ಗೆಲುವಿಗಾಗಿ ವಿಷ್ಣು ಖರರಟ್ಟಾಸುರರಿಗೆ ಚಾರ್ವಾಕಮತ ಬೋಧಿಸಲು ನಾರದನ ನೇಮಕ. ನಾರದನ ಬೋಧೆಯಿಂದ ರಕ್ಕಸರ ಅಟ್ಟಹಾಸ. ಬ್ರಾಹ್ಮಣರಿಂದ ಕ್ರೋಢಮುನಿಗೆ ದೂರು. ಐದು ಕಡೆ ಶಂಕರನಾರಾಯಣನಿಗಾಗಿ ತಪಸ್ಸು. ದೇವತೆಗಳ ಅಂಶಗಳಿಂದ ಶಂಕರನಾರಾಯಣ ಅವತಾರ. ಖರರಟ್ಟಾಸುರರ ಹನನ. ಧರ್ಮಸ್ಥಾಪನ.

**ಕವಿ ಪರಿಚಯ :**

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿಯ ಚೇರ್ಕಿ ಎಂಬಲ್ಲಿ ೧೯೬೨ ರ ಅಗಸ್ಟ ೧೩ರಂದು ಬಡಗುತಿಟ್ಟಿನ ಪ್ರಸಿದ್ಧ ಭಾಗವತರಾದ ಮಾರ್ವಿ ನಾರ್ಣಪ್ಪ ಉಪ್ಪೂರರ ಎಂಟನೇ ಹಾಗೂ ಕೊನೆಯ ಮಗನಾದ ದಿನೇಶ ಉಪ್ಪೂರ ಮನೆಯಲ್ಲಿ ಯಕ್ಷಗಾನ ವಾತಾವರಣದಲ್ಲಿಯೇ ಬೆಳೆದವರು. ಚಿಕ್ಕಂದಿನಲ್ಲಿ ಸಾಲಿಗ್ರಾಮ ಮಕ್ಕಳ ಮೇಳದ ಕಲಾವಿದರೂ ಆಗಿದ್ದ ದಿನೇಶ ಸ್ವತಃ ಶಂಕರನಾರಾಯಣ ಯಕ್ಷಗಾನ ಸಂಘ ಎಂಬ ಒಂದು ಹವ್ಯಾಸಿ ಸಂಸ್ಥೆಯನ್ನು ಕಟ್ಟಿ ಹಲವಾರು ಪ್ರಸಂಗಗಳನ್ನು ಪ್ರಾಯೋಗಿಕವಾಗಿ ನಿರ್ದೇಶನ ಮಾಡಿ ಬೇರೆ ಬೇರೆ ಸ್ಥಳಗಳಲ್ಲಿ ಆಟವಾಡಿ ಹಲವು ವರ್ಷ ನಡೆಸಿದ್ದರು. ಜೀವನ ನಿರ್ವಹಣೆಗಾಗಿ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸಿದ್ದು ಅದರಲ್ಲಿ ಅಧಿಕಾರಿಗಳಾಗಿದ್ದರು.

ಐರೋಡಿ ಸದಾನಂದ ಹೆಬ್ಬಾರರ ಹವ್ಯಾಸಿ ಮೇಳದಲ್ಲಿ ಸ್ತ್ರೀ ವೇಷಧಾರಿಗಳಾಗಿದ್ದರು. ಅವರ ತಂದೆಯವರ ಆಡಿಯೋ ವಿಡಿಯೋಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ಅವರು ಯಕ್ಷಗಾನ ಪ್ರಪಂಚಕ್ಕೆ ಉಪಯೋಗವಾಗುವ ಹಲವಾರು ಅಮೂಲ್ಯ ಆಡಿಯೋ ವಿಡಿಯೋಗಳನ್ನು ದಾಖಲೆಗಳನ್ನು ಸಂಗ್ರಹಿಸಿ ಇಟ್ಟಿದ್ದಾರೆ.

ಇವರು ಬರೆದ ಪ್ರಸಂಗಗಳು: ಚಂದ್ರನಖಿ, ಪ್ರತಿಮಾ ಪ್ರಸಂಗ, ಮೋಹನ ಕಲ್ಯಾಣಿ, ಶಂಕರನಾರಾಯಣ ಮಹಾತ್ಮೆ, ಸಂಗರ ಕೇಳು ಕುಂತಿ ಕತೆ

**ಟಿಪ್ಪಣಿ :**

# ಪ್ರಸಂಗ ಸಾಹಿತ್ಯ

**ಆರ್ಯ ಸವಾಯ್ - ಏಕ**
ಗಜಚರ್ಮಾಂಬರ ಅಗಜೆಯ ವರಸುತ |
ಗಜಮುಖನೇ ಪಾಲಿಸು ಎನ್ನ ||
ಭುಜಗಧಾರ ನಾಲ್ | ಭುಜ ಪೊರೆ ಪಾದಾಂ |
ಬುಜಕರ್ಪಿಸುವೆನು ಕೃತಿಯನ್ನ || 1 ||

**ದ್ವಿಪದಿ**
ಅನಘ ವಾಲ್ಮೀಕಿ ವ್ಯಾಸರುಗಳನು ಸ್ಮರಿಸಿ |
ಕನಕ ಸೂರ ಪುರಂದರರ ಮನದೊಳಿರಿಸಿ || 2 ||

ಪಾರ್ತಿಸುಬ್ಬಗೆ ದೇವಿದಾಸ ಮುದ್ದಣಗೆ |
ಕೀರ್ತಿಯುತ ನರಸಿಂಹಶಾಸ್ತ್ರಿ ವೆಂಕಣಗೆ || 3 ||

ಹಟ್ಟಿಯಂಗಡಿ ರಾಮಭಟ್ಟ ಭೀಮರಿಗೆ |
ವಿಟ್ಲಪಯ್ಯಗೆ ಕಡಂದಲೆಯ ರಾಮರಿಗೆ || 4 ||

ನಮಿಸುತೀ ಕೃತಿ ಯತ್ನ ಸಫಲಗೊಳಲೆಂದು |
ಸುಮನಸಾದ್ಯರ ಬೇಡಿಕೊಂಬೆ ಬಲಬಂದು || 5 ||

**ಕಾಂಭೋದಿ - ಝಂಪೆ**
ಸುರಪನೊಡ್ಡೋಲಗದೊ | ಳಿರಲೊಮ್ಮೆ ನಗುತೆಂದ |
ದುರುಳ ಜಂಭಾಸುರನ ರಣದಿ ||
ತರಿದು ಮೂಲೋಕವ | ನ್ನಿರಿಸಿದೆನು ಸೌಖ್ಯದಲಿ |
ಹರಿಹರ ವಿರಿಂಚಿಗಳ ದಯದಿ || 6 ||

ಒಡನೆಂದನಾ ವರುಣ | ಹಡೆದವಳು ಹಿರಿಯಳೆಂ |
ದಡಿಗಡಿಗೆ ವರಪಡೆದು ಬಂದು ||
ತುಡುಕಲಾ ಹರಿಹರರು | ಬಿಡದೆಮ್ಮ ಕಾಯ್ದುದಕೆ |
ಪಡೆದಿಹೆವು ಸುರಭಾಗ್ಯವಿಂದು || 7 ||

ಋಷಿ ಶಾಪದಿಂದಲನಿ | ಮಿಷಭೋಗ ಸಾಗರದ |
ವಶವಾಗಲುದಧಿ ಮಥನವನು ||
ಎಸಗೆ ದಾನವರ ವಂ | ಚಿಸಿದ ಹರಿಹರರು ಕರು |
ಣಿಸಿದರದನೆಂದ ಹುತವಹನ || 8 ||

**ಸೌರಾಷ್ಟ್ರ - ತ್ರಿವುಡೆ**
ಇರಲಿಕಿತ್ತಾ ದನುಜ ಜಂಬನ |
ತರಳರಾ ಖರರಟ್ಟರಾಕ್ಷಣ ||
ಗುರುಮುಖದಿ ಬಲು ವಿದ್ಯೆಗಳ ಕಲಿ | ತಿರಲು ಜವದಿ || 9 ||

ಎಮ್ಮ ಜನಕನ ಕೊಂದ ಸುರಪನ |
ಹಮ್ಮ ನಿಲಿಸುವ ಹೊರಡೆನುತ ಬಲು |
ಹುಮ್ಮಸದಿ ನುಡಿಯಲ್ಕೆ ಖರ ತಾ | ತಮ್ಮಗೆಂದ || 10 ||

ಸೇರಿ ಘೋರಾರಣ್ಯದೊಳು ತ್ರಿಪು |
ರಾರಿಯನು ತಪಗೈದು ಮೆಚ್ಚಿಸಿ |
ಕೋರುತವನೊಳು ವರವ ಮುಂದಣ | ದಾರಿ ತಿಳಿವ || 11 ||

**ಕಂದ**
ಎಂದಾಕ್ಷಣ ವನದೆಡೆಗೈ |
ತಂದಾ ದಾನವರು ಘೋರ ತಪವಂ ಗೈಯ್ಯಲ್ ||
ಇಂದುಧರನು ಮೈದೋರು |
ತ್ತೆಂದಂ ಬಿಡಿ ತಪವನೆನ್ನುತಲನುನಯಿಸಿದಂ || 12 ||

**ನವರೋಜು - ಏಕ**
ಮೆಚ್ಚಿದೆ ದೈತ್ಯರೆ ನಿಮಗೆ | ತವ |
ನಿಚ್ಚಟ ಭಕ್ತಿಯ ಬಗೆಗೆ ||
ಉಚ್ಚರಿಪುದು ಮನ | ದಿಚ್ಛೆಯನದ ನಾ |
ತಕ್ಷಣ ಸಲಿಸುವೆ | ನಿಶ್ಚಯವೆನ್ನಲು || 13 ||

**ಸಾಂಗತ್ಯ - ರೂಪಕ**
ಭಾವಜಹರ ಒಲಿದೀವುದಾದರೆ ಸಾವು |
ನೋವುಗಳಿರುವ ಈ ಭುವಿಯ ||
ಭಾವವಿಲ್ಲದೆ ಅಜರಾಮರರಾಗುವಂ |
ತಾ ವರ ನೀಡೆನೆ ಹರನು || 14 ||

ಹುಟ್ಟು ಸಾವುಗಳೆಂಬ ಕಟ್ಟುಪಾಡಿಗೆ ಒಳ |
ಪಟ್ಟಿರೆ ತವಜನ್ಮವಿನ್ನು ||
ಸೃಷ್ಟಿ ನೇಮವ ಮೀರಲೆಷ್ಟಾದರಳವೇ ನಿ |
ಮ್ಮಿಷ್ಟ ಬೇರೇನಿದೆಯೆನಲು || 15 ||

**ಪೀಲು - ಅಷ್ಟ**
ಹರಿಹರರೊಂದೇ ದೇಹದೊಳವತರಿಸಿ |
ಬರಲೈದು ರೂಪದೊಳಾಯುಧ ಧರಿಸಿ ||
ವರ ಚಕ್ರ ಶೂಲದೊಳೆದುರಿಸಲೆಮಗೆ |
ಮರಣವು ಬರಲೆನ್ನುತೆರಗಲು ಶಿವಗೆ || 16 ||

ಅಂತಾಗಲೆನ್ನುತ ನಗುತಾಶೀರ್ವದಿಸಿ |
ಅಂತರ್ಧಾನವ ಹೊಂದಲಸುರರು ಭ್ರಮಿಸಿ ||
ಎಂತಾದೊಡಪ್ಪುದೆ ಎರಡಾದುದೊಂದು |
ಅಂತ್ಯದಿ ಗೆದ್ದೆವೆಂದಾಕ್ಷಣ ಬಂದು || 17 ||

**ಕೇದಾರಗೌಳ - ಝಂಪೆ**
ಆಯಿತಿನ್ನೇನೆನ್ನುತ | ದಾನವ ನಿ |
ಕಾಯವನ್ನಣಿ ಗೈಯುತ |
ಆಯಮಳರುತ್ಸಾಹದಿ | ಮೂಲೋಕ |
ರಾಯಪುರಕೈದಿ ಜವದಿ || 18 ||

ರಾಕ್ಷಸರ ಗಡಣ ಸಹಿತ | ಆ ಸಹ |
ಸ್ರಾಕ್ಷನನು ಕೆಣಕಲೆನುತ ||
ತಕ್ಷಣದೊಳೈತಂದರು | ಸುರ ದ್ವಾರ |
ರಕ್ಷಕರ ಓಡಿಸಿದರು || 19 ||

ಚಾರಕರು ಬಂದೆರಗುತ | ಯುದ್ಧದ ವಿ |
ಚಾರವರುಹಲು ಕೇಳುತ ||
ಭೂರಿ ಸೇನೆಯ ನೆರಹುತ | ಸುರಪಾಲ |
ಸಾರಿದನು ಧುರಕೆನ್ನುತ || 20 ||

**ಭೈರವಿ - ಅಷ್ಟ**
ಎಲವೋ ದೇವೇಂದ್ರ ಕೇಳು | ತಂದೆಯ ಕೊಂದ |
ಛಲವನೀ ಸಮರದೊಳು ||
ನಿಲಿಸಲೈತಂದಿಹ ಖರರಟ್ಟರೈ ನಾವು |
ಬಲುಹನು ತೋರೀಗಳು || 21 ||

ದೈತ್ಯ ಜಂಬನ ಸುತರೇ | ಭೂ ಲೋಕವು |
ಪಥ್ಯವಾಗದೆ ಬಂದಿರೇ ||
ವೃತ್ರಾರಿಯೆದುರು ಪ್ರಮತ್ತರಾಗಳಿಯದೆ |
ಸ್ವಸ್ಥದಿ ಹಿಂದೆ ಸಾರಿ || 22 ||

ಮರಳಲಾಗಮಿಸಲಿಲ್ಲ | ಸಾವಿರದಂಥ |
ವರಗಳ ಪಡೆದೆವಲ್ಲ ||
ಸರಿಯಿಹರ್ಯಾರಿಂದು ಧುರದಿ ನಿನ್ನನು ಗೆದ್ದು |
ಸುರಲೋಕವಾಳುವೆವು || 23 ||

**ಭೈರವಿ - ಏಕ**
ವರ ಬಲದಿಂದೈತಂದ | ಧೂ |
ರ್ತರುಗಳು ಪೂರ್ವದೊಳಿದ ||
ಪರಿಗಳ ಸಲೆಮರೆತಿನ್ನು | ಸಾ |
ವರಸುತ ಬರೆ ಕೊಲ್ಲುವೆನು || 24 ||

ಹಿತನುಡಿಯಾಡಲು ನೀನು | ಪರಿ |
ಚಿತ ಹಿತವಂದಿಗನೇನು ||
ಪಿತಹಂತಕ ನಿನ್ನನ್ನು | ಸಲ |
ಹುತಕಾಯ್ವರ ಕರೆಯಿನ್ನು || 25 ||

**ನೀಲಾಂಬರಿ - ರೂಪಕ**
ಖರ ರಟ್ಟಾಸುರರೊಳು ಪರಿ |
ಪರಿಯಲಿ ಹೋರಾಡಿದ ನಿ |
ರ್ಜರಪತಿ ಜಯವನು ಕಾಣದೆ |
ಬಳಲಿದ ಶರಹತಿಗೆ || 26 ||

ಧುರದಿಂ ಹಿಮ್ಮೆಟ್ಟಲು ದೈ |
ತ್ಯರು ಸಚಿವನ ಕರೆದಮರರ |
ಪುರವಾಳಲು ನೇಮಿಸಿ ಹಿಂ |
ತಿರುಗಿದರುತ್ಸಹದಿ || 27 ||

**ಕಾಂಭೋದಿ - ಝಂಪೆ**
ಇತ್ತಲಿಳೆಯೊಳು ಶೈವ | ರುತ್ತಮನು ಹರನೆ ಸ |
ರ್ವೋತ್ತಮನು ಶ್ರೀಹರಿಯೆ | ನುತ್ತ ವೈಷ್ಣವರು || 28 ||

ಜಾತಿ ಮತ ಸಂಸ್ಕೃತಿಗೆ | ಜೋತು ಬಿದ್ದನ್ಯರನು |
ಘಾತಿಸುತ ಮದದಿ ದು | ರ್ನೀತರಾಗಿರಲು || 29 ||

ಚಂದ್ರಭಟ್ಟನು ಹೊಗಳ | ಲಿಂದುಧರನನ್ನು ಗೋ |
ವಿಂದುಪಾಧ್ಯನು ಹರಿಯೆ | ತಂದೆಯೆಂದೆನಲು || 30 ||

ಮೃಡನ ತಪವನು ಮದದಿ | ಕೆಡಿಸಬಂದಾಸ್ಮರನ ||
ಬಿಡದೆ ಸುಟ್ಟನು ಶಿವನು | ಕಿಡಿಗಣ್ಣ ತೆರೆದು || 31 ||

ಉರಿಹಸ್ತವನು ಹರನ | ಶಿರದ ಮೇಲಿಡ ಬಂದ |
ತರಳ ಭಸ್ಮನ ಕೊಂದ | ಹರಿಯು ಹೆಣ್ಣಾಗಿ || 32 ||

ದೃಢದಿ ಕಡೆಯಲು ಕಡಲ | ಒಡಲೊಳುದಿಸಿದ ವಿಷವ |
ಕುಡಿದ ಲೋಕದ ಹಿತಕೆ | ಮೃಡನು ತಾನಂದು || 33 ||

ರಕ್ಕಸರಿಗರಿಯದಂ | ತಿಕ್ಕಿದನು ಸುಧೆಯ ದೇ |
ವರ್ಕಳಿಗೆ ಮುದದಿಂದ | ಚಕ್ರಧರ ತಾನು || 34 ||

ಬಾಲ ಮಾರ್ಕಾಂಡೇಯ | ಶೂಲಿಯನು ಭಜಿಸೆ ಕಡೆ |
ಗಾಲದಲಿ ಮೃತ್ಯುವನೆ | ಸೋಲಿಸಿದ ಶಿವನು || 35 ||

ಕಲಿಧ್ರುವನ ಛಲದ ತಪ | ಕೊಲಿದ ಹರಿ ಶಾಶ್ವತದ |
ನೆಲೆಯ ಪದವಿಯನಿತ್ತ | ತಿಳಿಯಲಿಲ್ಲೇನು || 36 ||

**ವಾರ್ಧಕ**
ಹರನು ಮುಕ್ಕಣ್ಣನೀರೆರಡು ಕರ ಹರಿಗುರಗ |
ಧರನು ಹರನಹಿತಲ್ಪ ಹರಿಯು ತ್ರಿಶೂಲಿ ಶಂ |
ಕರ ಚಕ್ರಧರ ಹರಿಯು ಹರ ರುಂಡಮಾಲಿ ಶ್ರೀಧರನು ಕೌಸ್ತುಭಧಾರನು ||
ಚರಿಸೆ ನಂದಿಯು ಹರಗೆ ಗರುಡವಾಹನ ಹರಿಯು |
ಗಿರಿಜೆ ಗಂಗೆಯರು ಹರಗಿರಲು ಭೂರಮಣಿ ಸಿರಿ |
ಯರಸ ಹರಿ ಅವಮೇಲು ಶಿವಮೇಲು ಎಂದೆನುತ ಹೊಡೆದಾಡಿಕೊಳ್ಳುತಿರಲು || 37 ||

**ಭಾಮಿನಿ**
ಆ ಸಮಯಕೈತಂದು ಕ್ರೋಧ ಮು |
ನೀಶನೆಂದನು ಸಾಕು ಜಗಳವು |
ನಾಶ ಸರ್ವಕು ತಾಳ್ಮೆಯಿಂದಲಿ ಪೇಳಿ ನಡೆದುದನು ||
ಕ್ಲೇಶವಿಲ್ಲದೆ ಪೇಳ್ವೆ ತವ ಜಿ |
ಜ್ಞಾಸೆಗುತ್ತರವೆನ್ನಲಾಕ್ಷಣ |
ಭೂಸುರರು ಬಿಡದನಿಬರನು ದೂರುತ್ತ ವಾದಿಸಲು || 38 ||

**ಶಂಕರಾಭರಣ - ಮಟ್ಟೆ**
ಮೃಡನೆ ಮಿಗಿಲೆನುತ್ತ ಈತ |
ನುಡಿಯುತಿರುವನು ||
ಬಿಡಿರಿ ಸ್ವಾಮಿ ಒಮ್ಮೆ ಇವನ |
ನಡುವ ಮುರಿವೆನು || 39 ||

ಹರಿಯ ಹೊಗಳುತಿರುವ ನನ್ನ |
ನರಿಯನೀತನು ||
ಬರಿದೆ ತಡೆವಿರೇಕೆ ಬಿಡಿರಿ |
ಮುರಿವೆ ಸೊಕ್ಕನು || 40 ||

**ಬೇಗಡೆ - ಅಷ್ಟ**
ಸಾಕು ಬಿಡಿ ಹುರುಳಿಲ್ಲ ವಾದದಲಿ | ಸರಿಯಲ್ಲ ಧರ್ಮದಿ |
ತಾ ಕಡಿಮೆ ಹೆಚ್ಚೆಂಬ ಮಾನದಲಿ ||
ಕಾಕುಮತಿಗಳ ತೆರದಿ ನಿಮ್ಮೊಳ |
ಗೇಕೆ ಮತಧರ್ಮಗಳೆನುತ ಪ್ರ |
ತ್ಯೇಕಿಸುತ ಜಗಳಾಡಿ ನೀವವಿ |
ವೇಕತನದಿಂ ಬಾಳುತಿರುವಿರಿ || 41 ||

ಹರಿಯಿವನು ಅವ ಹರನು ಪರರವನು | ಎಂದೆನದೆ ಭಕ್ತಿಯೊಳ್ |
ಸ್ಮರಿಸಲೊಡನೈತಂದು ಸಲಹುವನು ||
ಧರೆಯೊಳವರವರುಗಳು ತಾವಾ |
ಚರಿಸಿಕೊಂಡೈತರುವ ಧರ್ಮವೆ |
ಪರಮ ಶ್ರೇಷ್ಠವು ಚರಮ ಸತ್ಯವಿ |
ದರಿತು ಬಾಳುವುದೆಂದು ತಿಳುಹಿದ || 42 ||

**ಕಂದ**
ತತ್ವಾಸ್ತಿತ್ವಕೆ ವ್ಯರ್ಥದಿ |
ಮರ್ತ್ಯರುಜಗಳಾಡಿಕೊಳ್ಳುತಿರಲಾ ಮುನಿಪಂ ||
ಪೃಥ್ವಿಯೊಳದ್ವೈತದೈಕ |
ಮತ್ಯವೆ ಮಿಗಿಲೆನುತಲೈದೆ ನಾದೇಶಗಿರಿಂ || 43 ||

**ಶಿವರಂಜಿನಿ - ರೂಪಕ**
ಬವರದಿ ಪರಿಭವವನ್ನನು |
ಭವಿಸುತ ನಿರ್ಜರಪತಿ ತ |
ನ್ನವರೊಂದಿಗೆ ಅನಿಮಿಷಲೋ | ಕವ ಬಿಟ್ಟಲೆಯುತಲಿ ||
ಬವಣೆಯ ಪರಿಹರಿಸುತ ಪೊರೆ |
ವವರ್ಯಾರೆನ್ನುತ ಸರಸಿಜ |
ಭವನೆಡೆಗೈದುತ ಬಲು ದುಃ | ಖವ ತಾನುಸುರಿದನು || 44 ||

**ಆರ್ಯಸವಾಯ್ - ಏಕ**
ಸಾಕು ಪುರಂದರ ದುಃಖಿಸಬೇಡೈ |
ನಾಕವು ಪೋದುದಕೆ ||
ಸ್ವೀಕರಿಪುದು ಬಹ ಸುಖಕಷ್ಟಗಳ ನಿ |
ರಾಕರಿಸಲಿಕಳವೆ || 45 ||

ದಾರಿಯನೊಂದನು ತೋರುವೆ ದುರಿತ ನಿ |
ವಾರಣೆಗಾನಿಂದು ||
ಘೋರನೆ ಸ್ತುತಿಸುವ | ನಾರಾಯಣ ಹರ |
ರೇ ರಕ್ಷಿಪುದೆಂದು || 46 ||

ಎನ್ನುತ ನೆನೆಯಲು ಹರಿ ಹರರಾಕ್ಷಣ |
ಕಣ್ಣೆದುರಿಗೆ ಬರುತ ||
ಮನ್ನಿಸೆ ಮಘವನು | ತನ್ನಿರವೇಳ್ದನು |
ಬನ್ನಣೆಯನು ಅಳುತ || 47 ||

ಬೇಡಿದೊಡನೆ ವರ ನೀಡಿದುದಕೆ ಹೀ |
ಗಾಡುತಿಹರು ಖಳರು ||
ಬೇಡವೆಮಗೆ ಪರ | ದಾಡುವ ಸ್ಥಿತಿ ನೀ |
ನೋಡೆನಲೀಶ್ವರನು || 48 ||

**ಕೇದಾರಗೌಳ - ಅಷ್ಟ**

ಖರ ರಟ್ಟರೆಮ್ಮನು | ನಿರತದಿ ಪೂಜಿಸು |
ತಿರುವರು ಭಕ್ತಿಯೊಳು ||
ದುರುಳರಲ್ಲವರ ಸಂ | ಹರಿಸುವ ಬಗೆಯೆಂತು |
ಸರಿಯಪ್ಪುದೇನೀಗಳು || 49 ||

ಮಗುಳೆಂದ ಹರಿ ನಸು | ನಗುತಲಿ ದುಷ್ಟರ |
ಹಗೆಗಳೆನ್ನುವರೆಮ್ಮನು ||
ಮಘವ ನೀನಲ್ಲಿವ | ರೆಗೆ ಕಾಯ್ವುದೆನಲಾಗ |
ಬಗೆಯರಿತಜನೆಂದನು || 50 ||

ಅದಕಾಗಿ ಮುನಿಪ ನಾ | ರದರನ್ನು ಕರೆಸಿ ವಿ |
ಶದವಾಗಿ ತಿಳಿಸುತೆಲ್ಲ ||
ಮದಮುಖರಲ್ಲಿಗ | ಟ್ಟಿದರೆ ದೈತ್ಯರ ಮನ |
ಬದಲಿಸಬಹುದೆನುತ || 51 ||

ನಾರದ ಮುನಿಪನ | ನಾರಾಧಿಸಲ್ಕಾಗ |
ವಾರಿಜಾಕ್ಷನೆ ಎನುತ ||
ಘೋರನೆ ಬಂದ್ಯಾವ | ಕಾರಿಯವೆಂದು ವಿ |
ಚಾರಿಸಿದನು ನಗುತ || 52 ||

**ಸುರುಟಿ - ಏಕ**

ಸುರಮುನಿವರ ಕೇಳು | ನಮಗುಪ |
ಕರಿಸುವುದಿಂದಿನೊಳು ||
ಸುರರನು ಸೋಲಿಸಿ | ಮೆರೆಯುತಲಿಹರಾ |
ಖರರಟ್ಟರ ಸಂ | ಹರಿಸುವ ಕೆಲಸಕೆ || 53 ||

ಹರನನು ಎಡಬಿಡದೆ | ಪೂಜಿಪ |
ದುರುಳರು ಹದಗೆಡದೆ ||
ತರಿಯಲಸಾಧ್ಯವು | ಧರಣಿಯೊಳಗೆ ದು |
ಷ್ಟರುಗಳು ಎನಿಸುವ | ತೆರದೊಳು ಮಾಡೈ || 54 ||

ಆದುದರಿಂದದಕೆ | ಪೋಗುತ |
ಲಾ ದೈತ್ಯರಪುರಕೆ ||
ಬೋಧಿಸಿ ನಾಸ್ತಿಕ | ವಾದವ ದೈವ ವಿ |
ರೋಧವನೆಸಗೆ ಪ್ರ | ಚೋದಿಸಿ ಬಾರೈ || 55 ||

ಶಕ್ಯರು ನಾವೆನುತ | ಸರ್ವಾ |
ಧಿಕ್ಯದಿ ಮೆರೆಯುತ್ತ ||
ಸೊಕ್ಕಿನೊಳಗೆ ದ್ವಿಜ | ಮುಖ್ಯರ ಹಿಂಸಿಸು |
ತುಕ್ಕಲಿ ಪಾಪದ | ಬೊಕ್ಕಸವೆನ್ನಲು || 56 ||

ಬಿರುಕನು ತಂದಿಡುವ | ಚಾಡಿಯ |
ನೊರೆಯುವೆನೆಂದೆನುವ ||
ಬಿರುದಿಹುದಾದರು | ದುಷ್ಟರ ನಾಶದ |
ಗುರಿಯಿಹ ಕಾರ್ಯವ | ಭರದಲಿ ಮಾಡುವೆ || 57 ||

ಎಂದಾಕ್ಷಣದೊಳಗೆ | ನಾರದ |
ಬಂದನಸುರರೆಡೆಗೆ ||
ಮಂದಸ್ಮಿತದಲಿ | ನಿಂದಿರೆ ಸುರಮುನಿ |
ಯಂದವ ಕಾಣುತ | ವಂದಿಸುತನಿಬರು || 58 ||

**ಭಾಮಿನಿ**
ಕರೆದು ತಂದುಪರಿಚರಿಸಲಾ ಮುನಿ |
ವರನು ಕುಶಲವೆ ಎನಲು ದೈತ್ಯರು |
ಪರಶಿವನ ದಯೆಯಿಂದಲಿಹೆವೆನೆ ನಗುತ ನಾರದನು ||
ಪರಮ ವಿಕ್ರಮದಿಂದ ಮೆರೆಯುತ |
ಲಿರುವ ನಿಮಗ್ಯಾರಿದಿರು ಸುಮ್ಮನೆ |
ಹರನ ಕೃಪೆಯಿಹುದೆನುವ ಮಾತ್ಯಾಕೆನೆ ಖರಾಸುರನು || 59 ||

**ದೇಶಿ - ಅಷ್ಟ**
ಏನಿದು | ಸ್ವಾಮಿ | ಏನಿದು || ಪ ||
ಏನಿದು ನಿಮ್ಮ ವಿಧಾನ ನವೀನ |
ನಾನು ಎಂಬಭಿಮಾನ ಹೀನರ ಮಾನ ||
ಕ್ಷೋಣಿಯೊಳೀಶ್ವರನನು ಮರೆತಿನ್ನು |
ಧ್ಯಾನಿಸಲನ್ಯವಿನ್ನಿಲ್ಲ ಹರಬಲ್ಲ || 60 ||

**ವಾರ್ಧಕ**
ಅದು ನನ್ನದಿದು ನನಗೆ ಇದಬಿಡೆನು ಎನ್ನದಿಹ |
ಬದುಕು ಬದುಕಲ್ಲವದು ಬದುಕಿನೊಳಗೊದಗಿ ಬಹ |
ಹದುಳವನು ಬದಿಗೆ ಸರಿಸದೆ ಅದನು ಮುದದಿಜಿತಗೊಳಿಸೆ ಸಿರಿಸಂಪದಗಳು ||
ಬದುಕಿದರೆ ಬದುಕು ತನ್ನಯ ಹದದ ತೆರದಿ ನ |
ನ್ನದು ನನಗೆ ನಾನು ಎಂಬುದ ಬಿಡದೆ ಗುರಿ ಸಾಧಿ |
ಸಿದರೆ ನೀವಾ ಸದಾಶಿವ ಜನಾರ್ದನರಿಳೆಯೊಳಿದುವೆ ಚಾರ್ವಾಕ ಮತವು || 61 ||

**ಮೋಹನ - ತ್ರಿವುಡೆ**
ಅಣ್ಣ ಕೇಳ್ನಾ ರದರೆನುವ ನುಡಿ |
ನನ್ನಿಯಹುದೈ ಇನ್ನು ಜನರೆ |
ಮ್ಮನ್ನು ಗುರುತಿಸುವಥಹ ಕಾರ್ಯಗ | ಳನ್ನು ಮಾಡಿ || 62 ||

ವಸುಧೆಯಮರರು ಯಾಗದೊಳು ಹೋ |
ಮಿಸಲಿ ನಮಗೆ ಹವಿಸ್ಸ ಇದಕೆರ |
ಡೆಸೆಗಿದರೆ ತೋರಿಸುವ ಯಮಪುರ | ದೆಸೆಯ ಜವದಿ || 63 ||

ರಸೆಯ ಜನರಿನ್ನೆಮ್ಮನೇ ಪೂ |
ಜಿಸಲಿ ಬೇಡಿದುದನ್ನು ನೆರೆವೇ |
ರಿಸುವೆವೆನ್ನುತಲಾಜ್ಞೆಯನು ಹೊರ | ಡಿಸಿದರಾಗ || 64 ||

ಭುವನದಲಿ ಸಂಚರಿಸಿ ನೋಡುವ |
ತವಕದಲಿ ಬರಲೊಂದು ಕಡೆ ಹೋ |
ಮವನು ಗೈಯುತಲಿರುವ ಮುನಿಗಳ | ನಿವಹ ಕಂಡು || 65 ||

ಓಂ ಇಂದ್ರಾಯ ಸ್ವಾಹಾ ಇಂದ್ರಾಯ ಇದಂ ನ ಮಮ
ಓಂ ಅಗ್ನಯೇ ಸ್ವಾಹಾ ಅಗ್ನಯೇ ಇದಂ ನ ಮಮ
ಓಂ ಯಮಾಯ ಸ್ವಾಹಾ ಯಮಾಯ ಇದಂ ನ ಮಮ
ಓಂ ನಿಋತಿಯೇ ಸ್ವಾಹಾ ನಿಋತಿಯೇ ಇದಂ ನ ಮಮ
ಓಂ ವರುಣಾಯ ಸ್ವಾಹಾ ವರುಣಾಯ ಇದಂ ನ ಮಮ
ಓಂ ವಾಯವೇ ಸ್ವಾಹಾ ವಾಯವೇ ಇದಂ ನ ಮಮ
ಓಂ ಕುಬೇರಾಯ ಸ್ವಾಹಾ ಕುಬೇರಾಯ ಇದಂ ನ ಮಮ
ಓಂ ಈಶಾನಾಯ ಸ್ವಾಹಾ ಈಶಾನಾಯ ಇದಂ ನ ಮಮ

**ಮೋಹನ - ತ್ರಿವುಡೆ**
ದೇವತೆಗಳಿಗೆ ಯಜ್ಞದಲಿ ನೀ |
ವೀವುದೇನು ಹವಿಸ್ಸ ನಿಮ್ಮನು |
ಕಾವರ್ಯಾರೆಂದದನು ಕೆಡಿಸ | ಲ್ಕಾ ವಿಬುಧರು || 66 ||

ಪೇಳಿದರು ವರ ಕ್ರೋಢಮುನಿಪಗೆ |
ಗೋಳಿಡುತಲೈತಂದು ಯಾಗವ |
ಹಾಳುಗೈದಾ ರಕ್ಕಸರನು ನಿ | ವಾರಿಸಲ್ಕೆ || 67 ||

**ಸಾರಂಗ - ಅಷ್ಟ**
ಲಾಲಿಸು ಕ್ರೋಢಮುನಿ | ದುರಾತ್ಮರ |
ಪಾಲಾಯಿತೆಲ್ಲ ಹಾನಿ ||
ದಾಳಿಯಿಟ್ಟಸುರರು | ಹಾಳೆಸಗಿದರ್ಯಾಗ |
ಶಾಲೆಯನೆಲ್ಲವ | ಧೂಳಿಪಟವಗೈದು || 68 ||

ಜೀವಿಸುವಂದವೆಂತು | ಖರ ರಟ್ಟರ |
ಹಾವಳಿಯತಿಯಾಯಿತು ||
ಆ ವಿಷ್ಣು ಭವರೊಂದೆ | ದೇವರಾಗುತ ಬರು |
ವಾವರೆಗಿಲ್ಲವು | ಸಾವೆಂಬ ವರವಂತೆ || 69 ||

**ಶಂಕರಾಭರಣ - ಮಟ್ಟೆ**
ಇಂತು ದುಃಖಿಸುವರನೆತ್ತಿ |
ಸಂತವಿಸುತ ಕ್ರೋಢಮುನಿಪ ||
ನಂತರಂಗದಲ್ಲಿ ತಾನು | ಚಿಂತಿಸುತ್ತಲಿ || 70 ||

ಈ ಭುವನದಿ ಜಾತಿ ಧರ್ಮ |
ಕ್ಷೋಭೆ ಹೆಚ್ಚಿತಸುರರದರ |
ಲಾಭ ಪಡೆದು ಮೆರೆವರಿಂದು | ಪ್ರಾಬಲ್ಯ ಹೊಂದಿ || 71 ||

ಇದು ಸಕಾಲ ದೇವರಿಳೆಗೆ |
ಒದಗಿ ಬಂದು ದುಷ್ಟ ಜನರ |
ಮದವನಡಗಿಸುತ್ತ ಧರ್ಮ | ಹದನು ಗೊಳಿಸಲು || 72 ||

**ವಾರ್ಧಕ**

ಎಂದು ದೃಢನಿಶ್ಚಯವಗೈದು ಹರಿಹರರ ಬಿಡ |
ದೊಂದೆ ಮನದಿಂದ ಘನ ತಪವಗೈಯುತ್ತಲಿರ |
ಲಿಂದ್ರ ಸಂಕಲ್ಪ ಪ್ರೇರಿತರಾಗಿ ಜಮದಗ್ನಿ ಲೋಮಶರಗಸ್ತ್ಯರುಗಳು ||
ಮಾಂಡವ್ಯರೆಸಗೆ ತಪವಂ ನಾಲ್ಕುದೆಸೆಯೊಳು ಪು |
ರಂದರಾದ್ಯರಿಗೆ ನಗುತೆಂದರು ಶಿವಾಚ್ಯುತರು |
ಬಂದುದೀಗ ಸಕಾಲ ನಾವಿಂದು ಧರೆಯೊಳವತರಿಸಿ ಧರ್ಮವ ಪೊರೆಯಲು || 73 ||

**ಘಂಟಾರವ - ಅಷ್ಟ**

ಆಗಲೆಂದಜ ಸುರರಿಗೆಲ್ಲರಿಗೆಂದ |
ಭಾಗವಹಿಸುವ ನಮ್ಮಶಕ್ತಿಯ |
ಭಾಗವಿತ್ತವತಾರಕೆ || 74 ||

ಪೊರಟರಾ ಶಿವ ಮಾಧವರದಕೊಪ್ಪಿ |
ಸುರನಿಕರ ತಿಲ ಶಕ್ತಿಪಡೆದವ |
ತರಿಸಲಿಳೆಗಾಕ್ಷಣದಲಿ || 75 ||

ಒಂದೆ ದೇಹ ಶಂಕರನಾರಾಯಣರಾಗಿ |
ಬಂದು ಪಂಚಮಹರ್ಷಿಗಳಿಗೊಲಿ |
ದಂದು ದರ್ಶನವಿತ್ತರು || 76 ||

**ಏಕತಾಳ**

ಜಯ ಶಂಕರ ಭೂತೇಶ ಸದಾಶಿವ |
ಜಯ ಗಂಗಾಧರ ನಮೋ ನಮೋ ||
ಜಯ ನಾರಾಯಣ ಮುರಹರ ಮಾಧವ |
ಜಯ ದಾಮೋದರ ನಮೋ ನಮೋ ||
ಜಯ ಶಂಕರನಾರಾಯಣ ಜಯ ಶಿವ |
ಕೇಶವ ಹರಿ ಹರ ನಮೋ ನಮೋ ||
ನಮೋ ನಮೋ || ನಮೋ ನಮೋ || 77 ||

**ಶಂಕರಾಭರಣ – ಅಷ್ಟ**

ಕಂಡನು | ಶಂಕರನಾರಾಯಣರನ್ನು | ಕಂಡನು || ಪ ||
ಕಂಡನು ಶಿವಕೇಶವರನು | ಅ |
ಖಂಡವಾದೇಕ ರೂಪವನು || ಆಹಾ |
ಕಂಡು ನಾ ಧನ್ಯತೆ ಹೊಂದಿದೆನೆಂದು ವಿ |
ಭಾಂಡು ಮೊಮ್ಮನು ತೋಷ |
ಗೊಂಡು ಸಂಸ್ತುತಿಸಿದ || 78 ||

ಬಲದ ಭಾಗದಲಿ ಶಂಕರನ | ನೆತ್ತಿ |
ಯೊಳು ಶೋಭಿಸುವ ತಂಗದಿರನ || ಮಹಾ |
ಬಲನು ಫಾಲಾಕ್ಷ ತ್ರಿಶೂಲವ ಧರಿಸಿಹ |
ನಲರುಂಡಮಾಲ ಚ | ರ್ಮಾಂಬರಧಾರನ ||79 ||

ವಾಮ ಭಾಗದಿ ನಾರಾಯಣನ | ಕನಕ |
ದಾಮ ನವಿಲಗರಿಯಿಹನ || ಆಹಾ |
ಶ್ರೀ ಮನೋಹರ ಪೀತಾಂಬರ ಚಕ್ರಧಾರನು |
ಶ್ರೀಮತಿ ಗೌರಿಯರೊಡನೆ ಈರ್ವರನಲ್ಲಿ || 80 ||

**ಮಧ್ಯಮಾವತಿ - ತ್ರಿವುಡೆ**
ಸಲಹು ಸಲಹೆಮ್ಮನ್ನು ತರಿದಾ |
ಖಳರನಿಳೆಯೊಳು ಧರ್ಮವನು ನೆಲೆ |
ಗೊಳಿಸು ಭಕ್ತರಿಗಾಗಿಯಿಲ್ಲಿಯೆ |
ನೆಲಸೆನುತ ಪದಕೆರಗಲು | ಭಕುತಿಯಿಂದ || 81 ||

ಸನುಮತಿಸುತಭಯವನು ಕೊಟ್ಟಾ |
ಹನುಮ ವಿನತಜ ದಕ್ಷಜಿತು ಹರ |
ಗಣ ಸಹಿತಲಾನಂದಿ ಬರಲೆನೆ |
ಕ್ಷಣದೊಳಗೆ ಬಂದೆರಗುತ | ಪೇಳ್ದರಾಗ || 82 ||

ಒಡೆಯ ನೀನೆನಗಪ್ಪಣೆಯ ಕೊಡು |
ಕೊಡು ಸಮರದೊಳು ರೆಕ್ಕೆಯೊಳು ಬಡಿ |
ಬಡಿದು ರಿಪುಗಳ ಕೊಲುವೆನೆಂದುಸಿ |
ರಿಡುತ ಗರುಡನು ಪೇಳಿದ | ಪಾದಕೆರಗಿ || 83 ||

ಧುರದೊಳರಿಗಳ ಸೊಕ್ಕಿಳಿಸಿ ಯಮ |
ಪುರಕೆ ಕಳುಹುವೆ ವೀಳೆಯವ ನನ |
ಗಿರಿಸಿ ಕಳುಹೈಯೆನುತ ರೋಷದಿ |
ಕುರುಳ ಸಂಭವಗರ್ಜಿಸೆ | ಹುರುಪಿನಿಂದ || 84 ||

ಕೊಟ್ಟರಾಣತಿ ಎನಗೆ ಆ ಖರ |
ರಟ್ಟರನು ಸಂಗರದಿ ಸೋಲಿಸಿ |
ಕಟ್ಟಿ ಬಾಲದಿ ತಹೆನೆನುತ ಪೊಡ |
ಮಟ್ಟು ಹನುಮನು ಪೇಳಲು | ವಂದಿಸುತ್ತ || 85 ||

ನಂದಿ ಕಡುಕೋಪದೊಳು ಗರ್ಜಿಸು |
ತೆಂದ ಖರ ರಟ್ಟರನು ಕೋಡುಗ |
ಳಿಂದಿರಿದು ಕೊಲ್ಲುವೆನು ನನ್ನ |
ನ್ನಿಂದು ಕಳುಹೆನೆ ಕೇಳುತಾ | ತಡೆಯುತವರ || 86 ||

**ಸಾಂಗತ್ಯ - ರೂಪಕ**
ಸಂತಸವಾಂತ ಶಂಕರನಾರಾಯಣನಾಗ |
ತಾಂತಳುವದೆ ಸೈನ್ಯಸಹಿತ ||
ಮುಂತೆರಳುತ ಮುನಿ ಸುರನಿಕರವ ಸೇರಿ |
ನಿಂತು ಸಹ್ಯಾದ್ರಿ ತಪ್ಪಲಲಿ || 87 ||

ನಂದಿಯ ಕರೆದೆಂದನಾದೈತ್ಯ ಮಂದಿರ |
ಕಿಂದೈದು ಸಂಧಾನಮಾಡು ||
ಹಿಂದಿನ ಕೃತ್ಯಕೆ ನೊಂದಿರೆ ಶರಣೆಂದು |
ಬಂದರೆ ಹಿತ ಹೇಳಿನೋಡು || 88 ||

**ಭಾಮಿನಿ**
ಒಡನೆ ಬಂದಾನಂದಿ ಖಳರಿಗೆ |
ನುಡಿಯಲದ ಕೇಳುತ್ತ ಕೋಪದಿ |
ಗುಡುಗುಡಿಸಿ ಖರನೆದ್ದ ಸಮರಕೆ ಸಿದ್ಧ ತಾನೆನುತ ||
ಮಡದಿ ರೇಣುಕೆಯದನರಿತು ಬಂ |
ದಡಿಗೆ ಮಣಿದೆರಡೆಣಿಸದಿರು ಎ |
ನ್ನೊಡೆಯ ಕೇಳ್ಮನದಿರವ ಪೇಳುವೆನೆನುತ ನುಡಿಸಿದಳು || 89 ||

**ಅಠಾಣ - ಅಷ್ಟ**
ತರವಲ್ಲ | ಕಾಂತ | ತರವಲ್ಲ || ಪ ||
ತರವಲ್ಲನೀವು ಸಂ | ಗರಕೆ ಪೋಗುವುದು |
ದುರಿತ ದುಶ್ಶಕುನಗ | ಳಿರದೆ ಕಂಡಿಹುದು ||
ಹರಿಹರರಿಂದವ | ತರಿಸಿ ಬಂದಿಹುದು |
ಅರಿತೆಸಗುವ ಕಾಲ | ವೆರೆಯ ಮುಂದಿಹುದು || 90 ||

ನಾವೆಲ್ಲರೊಂದಾಗಿ | ಭಾವ ಭಕ್ತಿಯೊಳು |
ಕಾವುದೆನ್ನುತ ಪೋಗಿ | ದೇವಗಿಂದಿನೊಳು ||
ಸೇವೆಗೈಯಲು ಒಲಿ | ದೀವ ರಕ್ಷೆಯನು |
ಪಾವನಗೈವ ಉಳಿ | ದಾಯುಷ್ಯವನ್ನು || 91 ||

**ತೋಡಿ - ಮಟ್ಟೆ**
ಕಾಂತೆ ನಿನ್ನ ಮನದ ಇಂಗಿತ | ನಾ ತಿಳಿದೆ ಸರ್ವ |
ಕಂತ್ಯವಿಹುದು ಇಲ್ಲ ಶಾಶ್ವತ ||
ಇಂತು ಮುಂದೆ ಸಾವಿಗಂಜುತ | ನಾವಿರುವ ಬದುಕಿ |
ಗಿಂತ ರಣದಿ ಸಾಯ್ವುದೇ ಹಿತ || 92 ||

**ಕಂದ**
ಕಾಂತೆಯ ನಿಂತೊರೆಯುತ ಖಳ |
ಸಂತೈಸುತ ಮನದಿ ಚಿಂತೆಯಂ ತಾಳುತ್ತಲ್ ||
ಮಂತ್ರಿ ಕರಾಳನ ಸಭೆಗಾ |
ಮಂತ್ರಿಸಿ ಸಂಗರಕೆ ಸಿದ್ಧರಾಗಲ್ಪೇಳ್ದಂ || 93 ||

**ಮಾರವಿ ಏಕ**
ಕಾಳಗಕೀಕ್ಷಣ | ವೀಳ್ಯ ಕೊಡೆನುತ ಕ |
ರಾಳನು ಬೊಬ್ಬಿಡುತ ||
ಪೇಳಲು ದೈತ್ಯರ | ಪಾಳಯ ಸಹ ರಣ |
ಕೇಳಿಗೆ ಬರುತಿರಲು || 94 ||

ರಣಕಿದಿರಾಗುತ ಹನುಮನು ಪೇಳಿದ |
ದನುಜ ಕರಾಳನಿಗೆ ||
ಸನಿಹಕೆ ಬಾ ಬಾಲದಿ ಕಟ್ಟುತ ನಿ |
ನ್ನನು ಕೊಲ್ಲುವೆ ಧುರದಿ || 95 ||

ಮಂಗವೆ ಅಧಿಕಪ್ರಸಂಗದಿ ವಿಷ ಕಾ |
ಳಿಂಗನ ಹೆಡೆ ತುಳಿದು ||
ಭಂಗಿಸಿದೆಯ ನಿನ್ನಂಗವಣೆಯ ರಣ |
ರಂಗದಿ ಮುರಿಯುವೆನು || 96 ||

ಗರುವ ನಿಲಿಪೆ ಬಾ ದುರುಳನೆಯೆನ್ನುತ ||
ಗರುಡನು ಎದುರಾಗಿ ||
ಬರಲು ಕರಾಳನು ಕಡಿದನು ರೆಕ್ಕೆಗ |
ಳೆರಡನು ಖತಿಯೇರಿ || 97 ||

ಬಂದೆಯ ಬಾ ಬಾರಿಂದಿಗಿಳೆಯ ಋಣ |
ಸಂದಿತು ನಿನಗೆನುತ ||
ನಂದಿಯು ಕೋಡುಗಳಿಂದಿರಿಯಲು ಖಳ |
ನೆಂದನು ಕ್ರೋಧದಲಿ || 98 ||

ಕೋಡುಗಳನ್ನೀಡಾಡುತ ಕಳುಹುವೆ |
ಕಾಡಲಿ ಮೇವುಂಡು ||
ಗಾಢದಿ ಕೊಬ್ಬಿದ ಮಾಂಸದಿ ಭೋಜನ |
ಮಾಡುವೆ ಮುದಗೊಂಡು || 99 ||

**ಭೈರವಿ - ಏಕ**

ಯುದ್ಧಕೆ ನಿಲು ನಿಲು ನೀನು | ನಾ |
ಮರ್ದಿಸಿದವ ದಕ್ಷನನು ||
ರುದ್ರನ ಮಗ ಕೇಳ್ಳಾನು | ಅಥ |
ಟಿದ್ದರೆ ಬಾ ಕೊಲ್ಲುವೆನು || 100 ||

ಸಿಟ್ಟಿನೊಳೆಂದನು ಬರುತ | ಖಳ |
ರಟ್ಟಾಸುರ ಗರ್ಜಿಸುತ ||
ಬಿಟ್ಟು ಬಿಡುವೆ ತೆರಳಿನ್ನು | ಕರೆ |
ಹುಟ್ಟಿಸಿದಾ ಅಪ್ಪನನು || 101 ||

ಧುರದೊಳು ದಾನವರಿದಿರು | ಸೋ |
ತೊರಗುತಲಿರೆ ನಿರ್ಜರರು ||
ಭರದೊಳು ಯುದ್ಧಕೆ ಎನುತ | ಶಂ |
ಕರನಾರಾಯಣ ಬರುತ ||102 ||

ನೋಡುತ ಖರರಟ್ಟರೊಳು | ಹೋ |
ರಾಟಕೆ ಬನ್ನಿರಿ ಎನಲು ||
ಮಾಡುತ ವಂದನೆಗಳನು | ಮಾ |
ತಾಡಿಸಿದರು ಯುಕ್ತಿಯೊಳು || 103 ||

**ಬಿಲಹರಿ - ಅಷ್ಟ**
ಘೋರ ತಪಸ್ಸಿಗಂದು | ನೀನೊಲಿದುಪ |
ಕಾರವಗೈದೆ ಬಂದು ||
ನಾರದರುಪದೇಶವನ್ನು ಮಾಡಿಸಿ ತಪ್ಪು |
ದಾರಿಗೆಳೆದೆ ಯಾಕಿಂದು || 104 ||

ಶುದ್ಧವಿರಲು ಇಂದ್ರಿಯ | ದುರ್ಬೋಧೆಯ |
ಮದ್ದು ನಾಟುವುದೆಂತಯ್ಯ ||
ಬದ್ಧತೆಯಿರದೆ ವಿರುದ್ಧ ಧರ್ಮದಿ ನಡೆಯೆ |
ಹೊದ್ದಿತಿಂತ ಗತಿಯು || 105 ||

**ಸಾಂಗತ್ಯ - ರೂಪಕ**
ನುಡಿಯಲೇನ್ನೈ ಕವ | ಲೊಡೆದ ಭಾವಗಳಿಂದು |
ಒಡಗೂಡಿತೆಮ್ಮ ಕೊಲ್ಲಲ್ಕೆ ||
ಮಡದಿಯರೊಂದಿಗೆ | ಬಿಡದಿಯಿನ್ನೆಲ್ಲಿ ಪಾ |
ಲ್ಗಡಲೋ ಮಸಣವೋ ಎನಲ್ಕೆ || 106 ||

ಭಕ್ತರ ಹೃದಯದಿ | ಸ್ವಸ್ಥದಿ ನೆಲೆಸಿ ಇ |
ಷ್ಟಾರ್ಥವ ಸಲಿಸುವೆವೆಂದು ||
ದೈತ್ಯರೆ ನೀವು ದು | ಷ್ಕೃತ್ಯವ ಗೈದಿಂಥ |
ಮೃತ್ಯುವ ಬರಿಸಿದಿರಿಂದು || 107 ||

**ಸಾವೇರಿ - ತ್ರಿವುಡೆ**
ಹಿಂದೆ ನಿನ್ನವಿರೋಧಿಸುತ ದಶ |
ಕಂಧರಾದಿಗಳೆಲ್ಲ ಮುಕ್ತಿಯ |
ಹೊಂದಿದರು ಹೋರಾಡುವೆವು ಬಿಡ | ದಿಂದು ಛಲದೆ || 108 ||

ಬದುಕುವಾಸೆಗಳಿಲ್ಲ ನಿನ್ನಾ |
ಯುಧವ ತೆಗೆತೆಗೆ ನಿನ್ನ ದಣಿಸುತ |
ಕದನದೊಳಗರ್ಪಿಸುವೆ ಪ್ರಾಣವ | ನಿದಕೊ ಬಾರೈ || 109 ||

**ದ್ವಿಪದಿ**
ಪೇಳಲಂತರ್ಯವನು ತಿಳಿದಾಗಲೆಂದು |
ಶೂಲ ಚಕ್ರವನೇಕಕಾಲದಲಿ ತೆಗೆದು || 110 ||

ಬಿಟ್ಟನಾಕ್ಷಣದಿ ಖರರಟ್ಟರಿಗೆ ತಾನು |
ತಟ್ಟನಿಳೆಗೊರಗಿದರು ಬಿಟ್ಟು ಪ್ರಾಣವನು || 111 ||

ಜಯತು ಶಂಕರನೆ ನಾರಾಯಣನೆ ಎನುತ |
ಭಯಭಕ್ತಿಯಿಂದ ಸ್ತುತಿಗೈಯೆ ಜನವ್ರಾತ || 112 ||

ಸಲಹೆನುವ ಭಕ್ತಜನ ಮೊರೆ ಕೇಳಿ ಸ್ವಾಮಿ |
ನೆಲೆನಿಂತನಲ್ಲಿ ಸದ್ಭಕುತಜನ ಪ್ರೇಮಿ || 113 ||

ಬರೆದನಿದ ಮೇತಿಂಗಳಿಪ್ಪತ್ತರಲ್ಲಿ |
ಎರಡು ಸಾವಿರದೊಂದನೇ ಇಸವಿಯಲ್ಲಿ || 114 ||

ನಾರಾಯಣಾತ್ಮಜ ದಿನೇಶ ನಾಮಕನು |
ಮಾರ್ವಿ ಎಂಬೂರು ಉಪ್ಪೂರ ವಂಶಜನು || 115 ||

**ಧವಳಾರ - ಏಕ**

ಕ್ರೋಢಪುರದಿ ನೆಲೆನಿಂತು ಭಕ್ತರಿಗೆ |
ಬೇಡಿದಭೀಷ್ಟವೀವಾ ಶಿವಾಚ್ಯುತಗೆ ||
ನೋಡೆ ವಿಶಿಷ್ಟಾದ್ವೈತವ ಸಾರ್ದಗೆ |
ಗಾಢದಿ ಗೌರಿ ಲಕ್ಷ್ಮಿಯರೊಡ ಸೇರ್ದಗೆ ||
ಜೋಡಿಯಾರತಿಯ ಬೆಳಗಿದರು | ಶೋಭಾನೆ || 116 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪುಸ್ತಕನಿಧಿ, ಕುಂದಾಪುರ - ೨೦೧೩

**ಪ್ರಸಂಗ ಪ್ರತಿ ಆಧಾರ:** ಪ್ರಸಂಗಕರ್ತರ ಮೂಲಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ದಿನೇಶ ಉಪ್ಪೂರ ಎಮ್. ಎನ್.

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ಬರವಣಿಗೆ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ ಎಮ್. ಎನ್.

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ